# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1436** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **18-12-2025** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು.** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ರಾಜಧಾನಿಯಲ್ಲಿರುವ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಖೈದಿಗಳಿಗೆ ಐಷಾರಾಮಿ ಸೇವೆಗಳಾದ ಮೊಬೈಲ್ ಫೋನ್, ಟಿ.ವಿ, ಮದ್ಯ, ಸಿಗರೇಟ್‌ಗಳು ಮತ್ತು ಇನ್ನಿತರೆ ಐಷಾರಾಮಿ ಸೇವೆಗಳು ಸಿಗುತ್ತಿರುವ ಮಾಹಿತಿಯು ನಿಜವೇ ? | ದಿನಾಂಕ: 08.11.2025 ಮತ್ತು 09.11.2025ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳು ಮದ್ಯದ ಪಾರ್ಟಿ, ನೃತ್ಯ, ಮೊಬೈಲ್ ಫೋನ್ ಬಳಕೆ, ಸೇರಿದಂತೆ ಅನೇಕ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದಾಗಿ ವಿವಿಧ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ಪ್ರಕರಣಗಳ ಕುರಿತು, ಈ ಕೆಳಕಂಡಂತೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. |

| ಕ್ರ. ಸಂ. | ಪ್ರಕರಣ ಸಂಖ್ಯೆ & ದಿನಾಂಕ | ಷರಾ |
|---|---|---|
| 1 | NCR. No: 050/2025, ದಿನಾಂಕ: 08.11.2025 | Cr. No: 0331/2025 ದಿನಾಂಕ: 20.11.2025 |
| 2 | NCR. No: 051/2025 ದಿನಾಂಕ: 08.11.2025 | Cr. No: 0332/2025 ದಿನಾಂಕ: 20.11.2025 |
| 3 | NCR. No: 052/2025 ದಿನಾಂಕ: 08.11.2025 | Cr. No: 0333/2025 ದಿನಾಂಕ: 20.11.2025 |
| 4 | NCR. No: 053/2025 ದಿನಾಂಕ: 08.11.2025 | Cr. No: 0334/2025 ದಿನಾಂಕ: 20.11.2025 |
| 5 | Cr. No: 0321/2025 ದಿನಾಂಕ: 10.11.2025 | - |

| | | |
|---|---|---|
| | | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಂದ ಮದ್ಯ ತಯಾರಿಕೆ / ಕಾರಾಗೃಹದಲ್ಲಿ ವೈನ್ ತಯಾರಿಕೆ ಎಂಬ ಶೀರ್ಷಿಕೆಯಡಿ ದಿನ ಪತ್ರಿಕೆಗಳಲ್ಲಿ ದಿನಾಂಕ: 27.11.2025ರಂದು ಪ್ರಕಟವಾದ ಸುದ್ದಿಯ ಕುರಿತು ಕೂಲಂಕಷವಾಗಿ ಪರಿಶೀಲಿಸಿ, ವಿಚಾರಣೆಯನ್ನು ನಡೆಸಿ, ಪ್ರಾಥಮಿಕ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಕಾರಾಗೃಹಗಳ ಉಪಮಹಾ ನಿರೀಕ್ಷಕರು, ದಕ್ಷಿಣ ವಲಯ, ಬೆಂಗಳೂರು ರವರಿಗೆ ಈ ಕಛೇರಿಯ ಜ್ಞಾಪನ ಸಂಖ್ಯೆ: DGPCSB/JDLU/SEC2/44/2025-JUDCL, ದಿನಾಂಕ: 28.11.2025 ರಲ್ಲಿ ಈಗಾಗಲೇ ಸೂಚಿಸಲಾಗಿರುತ್ತದೆ. |
| (ಆ) | ಕೆಲವೊಂದು ಮಾಧ್ಯಮ ಚಾನೆಲ್ ಗಳು ಇದನ್ನು ತಮ್ಮ ಸುದ್ದಿಗಳಲ್ಲಿ ಪ್ರಕಟಿಸಿದ್ದು, ಐಸಿಸ್ ಉಗ್ರರಿಗೆ, ರೌಡಿಶೀಟರ್‌ಗಳಿಗೆ ಮತ್ತು ಅಪರಾಧಿಗಳಿಗೆ ವಿಐಪಿ ಸೇವೆ ನೀಡುತ್ತಿರುವುದು ನಿಜವೇ? | ರಾಜ್ಯದ ಕಾರಾಗೃಹಗಳಲ್ಲಿ ನಡೆದಿರುವ ಕಾನೂನು ಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶ್ರೀ ಆರ್. ಹಿತೇಂದ್ರ,, ಭಾ.ಪೊ.ಸೇ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಕಾನೂನು ಮತ್ತು ಸುವ್ಯವಸ್ಥೆ) ರವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ, ವರದಿಯನ್ನು ಸಲ್ಲಿಸಲು ಸರ್ಕಾರವು ಆದೇಶವನ್ನು ಹೊರಡಿಸಿರುತ್ತದೆ. ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ ತಪ್ಪಿತಸ್ಥ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಕಾನೂನು ಮತ್ತು ಶಿಸ್ತು ಕ್ರಮ ಜರುಗಿಸಲಾಗುವುದು. |
| (ಇ) | ಈ ರೀತಿ ಅಪರಾಧಿಗಳಿಗೆ ಮತ್ತು ಉಗ್ರರಿಗೆ ಜೈಲಿನಲ್ಲಿ ಎಲ್ಲಾ ಸೇವೆಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದ್ದಲ್ಲಿ ಈ ದಂಧೆಯಲ್ಲಿ ಶಾಮೀಲಾದ ಜೈಲ್ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು ? | 1) ಈ ಹಿಂದೆ ಉಗ್ರರಿಗೆ ಸಹಾಯ ನೀಡಿದ ಪ್ರಕರಣದಲ್ಲಿ ಡಾ॥ ನಾಗರಾಜ್, ಮನೋವೈದ್ಯರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶ್ರೀ ಚಾಂದ ಪಾಷ, ಎ.ಎಸ್.ಐ. ಆಡಗೋಡಿ ಇವರನ್ನು ಬಂಧಿಸಿ ಪ್ರಸ್ತುತ ಕಾರಾಗೃಹದಲ್ಲಿ ವಿಚಾರಣಾ ಬಂಧಿಯಾಗಿ ದಾಖಲಾಗಿರುತ್ತಾರೆ.<br>2) ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಖೈದಿಗಳಿಗೆ ವಿಶೇಷ ಆತಿಥ್ಯ ನೀಡಿರುವ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಪ್ರಸಾರವಾದ ಕುರಿತು ಪ್ರಾಥಮಿಕ ವರದಿಯ ಮೇರೆಗೆ ಸದರಿ ಕಾರಾಗೃಹದ ಮುಖ್ಯ ಅಧೀಕ್ಷಕರನ್ನು ವರ್ಗಾವಣೆ ಮಾಡಲಾಗಿರುತ್ತದೆ ಹಾಗೂ ಅಧೀಕ್ಷಕರು ಮತ್ತು ಸಹಾಯಕ ಅಧೀಕ್ಷಕರನ್ನು ಕರ್ತವ್ಯದಿಂದ ನಿಲಂಬನೆಗೊಳಿಸಿ ಹುದ್ದೆಯ ಹಕ್ಕನ್ನು ಬೇರೆ ಕಾರಾಗೃಹಕ್ಕೆ ವರ್ಗಾಯಿಸಲಾಗಿರುತ್ತದೆ. |

| | | |
|---|---|---|
| | | ಈ ಮೇಲ್ಕಂಡ ಪ್ರಕರಣದಲ್ಲಿ ತಪ್ಪಿತಸ್ಥರ ಬಂದಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ 05 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಪ್ರಸ್ತುತ ಸದರಿ ಪ್ರಕರಣಗಳು ತನಿಖೆಯಲ್ಲಿರುತ್ತದೆ. |

**ಸಂಖ್ಯೆ: ಹೆಚ್‌ಡಿ 371 ಪಿಆರ್‌ಎ 2025**

**( ಡಾ: ಜಿ.ಪರಮೇಶ್ವರ )**
ಗೃಹ ಸಚಿವರು.